ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE 2/9/2020

# ವಾರ್ನಿಂಗ್!

## ಕೊರೋನಾ ಸ್ಥಿತಿ ಹೀಗೇ ಮುಂದುವರೆದರೆ ದೇಶದಲ್ಲಿ ಜನವರಿಗೆ 1.3 ಕೋಟಿ ಕೇಸ್!

### 1.8 ಲಕ್ಷ ಸಾವು | ಸ್ಥಿತಿ ಸುಧಾರಿಸಿದರೆ 90 ಲಕ್ಷ ಕೇಸ್ | ಐಐಎಸ್‌ಸಿ ವರದಿ

ಕೊರೋನಾ ಸೋಂಕು ಕೈಮೀರಿದರೆ ಜನವರಿಗೆ 3.2 ಕೋಟಿ ಕೇಸ್, 3.7 ಲಕ್ಷ ಜನರ ಸಾವು

ಸೆಪ್ಟೆಂಬರ್‌ಗೆ 35 ಲಕ್ಷ ಕೇಸ್ ಆಗುತ್ತದೆಂದು ಐಐಎಸ್‌ಸಿ ಹೇಳಿತ್ತು | ಇದು ಈಗ ನಿಜವಾಗಿದೆ

• **ಕನ್ನಡ ಪ್ರಭ ವಾರ್ತೆ** ಬೆಂಗಳೂರು

ಪ್ರಸ್ತುತ ದೇಶದಲ್ಲಿ ಕೊರೋನಾ ಸೋಂಕಿನ ಹರಡುವಿಕೆ ಈಗಿನ ಪ್ರಮಾಣದಲ್ಲೇ ಮುಂದುವರೆದರೆ ಜನವರಿ 1ರ ವೇಳೆಗೆ 1.30 ಕೋಟಿ ಜನರಲ್ಲಿ ಸೋಂಕು ಕಾಣಿಸಿಕೊಂಡು 1.8 ಲಕ್ಷ ಜನ ಮೃತರಾಗಬಹುದು. ಅನಿಯಂತ್ರಿತವಾಗಿ ಹಬ್ಬಿ ಪರಿಸ್ಥಿತಿ ಬಿಗಡಾಯಿಸಿದರೆ ಸೋಂಕಿನ ಪ್ರಕರಣ 3.20 ಕೋಟಿ ತಲುಪಿ 3.7 ಲಕ್ಷ ಜನ ಪ್ರಾಣ ಕಳೆದುಕೊಳ್ಳಬಹುದು. ಆದರೆ ಇನ್ನಷ್ಟು ಹರಡದಂತೆ ಹೆಚ್ಚಿನ ಮುಂಜಾಗ್ರತಾ ಕ್ರಮ ಕೈಗೊಂಡರೆ ಸೋಂಕಿತರ ಸಂಖ್ಯೆ 90 ಲಕ್ಷ ತಲುಪಿ 1.4 ಲಕ್ಷ ಜನ ಸಾವಿಗೀಡಾಗಬಹುದು ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ತಜ್ಞರ ತಂಡ ವರದಿ ನೀಡಿದೆ.

ಜನರ ವರ್ತನೆ, ಸಾಮಾಜಿಕ ಅಂತರ, ಸ್ವಚ್ಛತಾ ಅಭ್ಯಾಸ, ಸರ್ಕಾರದ ಆದೇಶಗಳ ಪಾಲನೆ, ಸರ್ಕಾರದ ನೀತಿ ನಿಯಮಗಳನ್ನು ಗಮನದಲ್ಲಿರಿಸಿಕೊಂಡು ಈ ವರ್ಷದ ಅಕ್ಟೋಬರ್ ತಿಂಗಳಿಂದ ಮುಂದಿನ ವರ್ಷದ ಮಾರ್ಚ್ ತಿಂಗಳವರೆಗೆ ಕೊರೋನಾ ಸೋಂಕಿನ ಪ್ರಕರಣಗಳು ಎಷ್ಟಾಗಬಹುದೆಂದು ವರದಿಯಲ್ಲಿ ವಿವರಿಸಲಾಗಿದೆ.

ಐಐಎಸ್‌ಸಿಯ ಪ್ರೊ. ಶಶಿಕುಮಾರ್ ಜಿ ಪ್ರೊ. ದೀಪಕ್ ಕುಮಾರ್ ಮತ್ತವರ ತಂಡ ಜುಲೈ ತಿಂಗಳಿನಲ್ಲಿ ವರದಿಯೊಂದನ್ನು ನೀಡಿ ಕೊರೋನಾ ಹಬ್ಬುವಿಕೆಯನ್ನು ನಿಯಂತ್ರಿಸಲು ವಿಫಲವಾದರೆ ಸೆಪ್ಟೆಂಬರ್ ಒಂದರ ಹೊತ್ತಿಗೆ ದೇಶದಲ್ಲಿ 35 ಲಕ್ಷ ಕೊರೋನಾ ಪ್ರಕರಣಗಳು ವರದಿಯಾಗಲಿದೆ ಎಂದು ನಿಖರವಾಗಿ ಅಂದಾಜಿಸಿತ್ತು. ಇದೀಗ ಮತ್ತೆ 2021ರ ಮಾರ್ಚ್ ವರೆಗಿನ ಕೊರೋನಾ ಹಬ್ಬುವ ಸಾಧ್ಯತೆಗಳ ಬಗೆಗಿನ ವರದಿಯೊಂದನ್ನು ಇದೇ ತಂಡ ರೂಪಿಸಿದೆ.

**ಮಾರ್ಚ್ 24ರ ವೇಳೆಗೆ:** 2021 ಮಾರ್ಚ್ 24 ಹೊತ್ತಿಗೆ ಈಗಿರುವ ವೇಗದಲ್ಲೇ ಕೋವಿಡ್ ಹಬ್ಬಿದರೆ 1.40 ಕೋಟಿ ಜನರಿಗೆ ಸೋಂಕು ಅಂಟಲಿದ್ದು ಇದರಲ್ಲಿ 2 ಲಕ್ಷ ಜನ ಪ್ರಾಣ ಕಳೆದುಕೊಳಲಿದ್ದಾರೆ.

► 7



| ಪರಿಸ್ಥಿತಿ | ಕೇಸು | ಸಾವು |
|---|---|---|
| **ಜನವರಿ 1, 2021** | | |
| ಸ್ಥಿತಿ ಇದೇ ರೀತಿ ಇದ್ದರೆ | 1.3 ಕೋಟಿ | 1.8 ಲಕ್ಷ |
| ಸ್ಥಿತಿ ಹದಗೆಟ್ಟರೆ | 3.2 ಕೋಟಿ | 3.7 ಲಕ್ಷ |
| ಸ್ಥಿತಿ ಸುಧಾರಿಸಿದ್ದರೆ | 90 ಲಕ್ಷ | 1.4 ಲಕ್ಷ |
| **ಮಾರ್ಚ್ 24, 2021** | | |
| ಸ್ಥಿತಿ ಇದೇ ರೀತಿ ಇದ್ದರೆ | 1.4 ಕೋಟಿ | 2 ಲಕ್ಷ |
| ಸ್ಥಿತಿ ಹದಗೆಟ್ಟರೆ | 4.9 ಕೋಟಿ | 5.8 ಲಕ್ಷ |
| ಸ್ಥಿತಿ ಸುಧಾರಿಸಿದರೆ | 90.1 ಲಕ್ಷ | 1.43 ಲಕ್ಷ |

## ರಾಜ್ಯದಲ್ಲಿ 2ನೇ ಬಾರಿ ಕೊರೋನಾ 9000+

### 3.5 ಲಕ್ಷ ದಾಟಿದ ಒಟ್ಟು ಕೊರೋನಾ ನಿನ್ನೆ ದಾಖಲೆಯ 83000 ಪರೀಕ್ಷೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಎರಡನೇ ಬಾರಿಗೆ ಒಂದೇ ದಿನ 9 ಸಾವಿರಕ್ಕೂ ಹೆಚ್ಚು ಸೋಂಕಿತರು ಮಂಗಳವಾರ ಪತ್ತೆಯಾಗಿದ್ದಾರೆ. 9058 ಜನರಲ್ಲಿ ಸೋಂಕು ಕಾಣಿಸಿಕೊಳ್ಳುವುದರೊಂದಿಗೆ ರಾಜ್ಯದಲ್ಲಿ ಕೊರೋನಾ ಸೋಂಕಿತರ ಒಟ್ಟು ಸಂಖ್ಯೆ 3.51 ಲಕ್ಷ ದಾಟಿದೆ.

ಈ ಪೈಕಿ 90,999 ಸಕ್ರಿಯ ಪ್ರಕರಣಗಳಿದ್ದು ವಿವಿಧ ಕಡೆ ಚಿಕಿತ್ಸೆ ನೀಡಲಾಗುತ್ತಿದೆ. ಇದೇ ವೇಳೆ 762 ಕೋರೊನಾ ಸೋಂಕಿತರು ತೀವ್ರ ನಿಗಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಂಗಳವಾರ ಕೋವಿಡ್‌ನಿಂದ 135 ಮಂದಿ ಮೃತಪಡುವುದರೊಂದಿಗೆ ಈವರೆಗೆ ಒಟ್ಟು ಸಾವಿನ ಸಂಖ್ಯೆ 5,837ಕ್ಕೆ ಏರಿದ್ದು, 5,159 ಮಂದಿ ಗುಣಮುಖರಾಗಿದ್ದಾರೆ. ಇದರೊಂದಿಗೆ ರಾಜ್ಯದಲ್ಲಿ ಕೊರೋನಾದಿಂದ ಗುಣಮುಖರಾದವರ ಸಂಖ್ಯೆ 2.54 ಲಕ್ಷಕ್ಕೆ ತಲುಪಿದೆ. ಆಗಸ್ಟ್ 21ರಂದು ಮೊದಲ ಬಾರಿ ಸೋಂಕಿತರ 9 ಸಾವಿರ ಸಂಖ್ಯೆ 9150ಕ್ಕೆ ತಲುಪಿತ್ತು.

► 7

## ಆಗಸ್ಟ್ ತಿಂಗಳಲ್ಲೇ 20 ಲಕ್ಷ ಕೇಸ್

### ಇಷ್ಟು ಸೋಂಕು ವಿಶ್ವದಲ್ಲೆಲ್ಲೂ ಇಲ್ಲ ಆಗಸ್ಟ್‌ನಲ್ಲಿ 28800 ಮಂದಿ ಬಲಿ

**ನವದೆಹಲಿ:** ದೇಶದಲ್ಲಿ ಕೊರೋನಾ ಅಬ್ಬರ ಮುಂದುವರಿದಿದ್ದು, ಆಗಸ್ಟ್‌ನಲ್ಲಿ ಮಾರಕ ವೈರಾಣು ರಣಕೇಕೆ ಹಾಕಿರುವ ಸಂಗತಿ ಬೆಳಕಿಗೆ ಬಂದಿದೆ. ಆಗಸ್ಟ್ ತಿಂಗಳೊಂದರಲ್ಲೇ ಸುಮಾರು 20 ಲಕ್ಷ ಸೋಂಕಿತರು ದೇಶದಲ್ಲಿ ಕಂಡುಬಂದಿದ್ದಾರೆ. 28 ಸಾವಿರ ಮಂದಿ ಬಲಿಯಾಗಿದ್ದಾರೆ. ಒಂದೇ ತಿಂಗಳಲ್ಲಿ ಇಷ್ಟೊಂದು ಸಂಖ್ಯೆಯ ಸೋಂಕಿತರು ವಿಶ್ವದ ಬೇರಾವ ದೇಶದಲ್ಲೂ ಕಂಡುಬಂದಿಲ್ಲ, ಹೀಗಾಗಿ ಭಾರತ ಜಗತ್ತಿನ ಕೊರೋನಾ ಹಾಟ್‌ಸ್ಪಾಟ್ ಆಗುವತ್ತ ದಾಪುಗಾಲಿಡುತ್ತಿದೆಯೇ ಎಂಬ ಆತಂಕ ಎದುರಾಗಿದೆ.

ಜುಲೈನಲ್ಲಿ ಅಮೆರಿಕದಲ್ಲಿ ವಿಶ್ವದಲ್ಲೇ ಗರಿಷ್ಠ 19,04,462 ಪ್ರಕರಣಗಳು ದಾಖಲಾಗಿದ್ದವು. ಆದರೆ ಆಗಸ್ಟ್‌ನಲ್ಲಿ ಅದನ್ನು ಭಾರತ ಮೀರಿಸಿದೆ. 19,87,705 ಸೋಂಕಿತರು ಭಾರತದಲ್ಲಿ ಪತ್ತೆಯಾಗಿದ್ದಾರೆ.

► 11

## ಆಗಸ್ಟ್ ತಿಂಗಳಲ್ಲೇ 20 ಲಕ್ಷ ಕೇಸ್

◄ ಮೊದಲ ಪುಟದಿಂದ

ದೇಶದ ಒಟ್ಟು ಕೊರೋನಾ ಸೋಂಕಿನಲ್ಲಿ ಆಗಸ್ಟ್ ಕೊಡುಗೆ ಶೇ.54ರಷ್ಟಿದೆ ಎಂದು ಅಂಕಿ-ಅಂಶಗಳು ತಿಳಿಸಿವೆ. ಜು.31 ರಂದು ಭಾರತದಲ್ಲಿ 16.38 ಲಕ್ಷ ಸೋಂಕಿತರು ಇದ್ದರು. ಆದರೆ ಆಗಸ್ಟ್ ಅಂತ್ಯಕ್ಕೆ ಅದು 36 ಲಕ್ಷಕ್ಕೆ ಜಿಗಿತ ಕಂಡಿದೆ. ಮತ್ತೊಂದೆಡೆ ಆಗಸ್ಟ್‌ನಲ್ಲಿ 28,859 ಮಂದಿ ಭಾರತದಲ್ಲಿ ಕೊರೋನಾಗೆ ಬಲಿಯಾಗಿ ದ್ದಾರೆ. ಇದು ಜುಲೈಗೆ ಹೋಲಿಸಿದರೆ ಶೇ.50ರಷ್ಟು ಅಧಿಕ. ಭಾರತದಲ್ಲಿ ಸಾವಿನ ಸಂಖ್ಯೆ ಕೊಂಚ ಕಡಿಮೆ. ಏಕೆಂದರೆ ಅಮೆರಿಕದಲ್ಲಿ ಆಗಸ್ಟ್‌ನಲ್ಲಿ 30 ಸಾವಿರ ಹಾಗೂ ಬ್ರೆಜಿಲ್‌ನಲ್ಲಿ 29565 ಸಾವುಗಳು ಸಂಭವಿಸಿವೆ.

---

**ಆತಂಕದ ಮಾಹಿತಿ** ಅಕ್ಟೋಬರ್‌ನಲ್ಲಿ 17.2 ಲಕ್ಷ ಸಕ್ರಿಯ ಪ್ರಕರಣ । ರಾಷ್ಟ್ರೀಯ ದತ್ತಾಂಶವನ್ನು ಪಡೆದುಕೊಂಡು ಈ ಲೆಕ್ಕಾಚಾರ: ಽ

# ದೇಶದಲ್ಲಿ ಜನವರಿಗೆ 1.3 ಕೋಟಿ ಕೇಸ್!

◄ ಮೊದಲ ಪುಟದಿಂದ

ಒಂದು ವೇಳೆ ಈ ಅವಧಿಯಲ್ಲಿ ಕೊರೋನಾ ಸೋಂಕು ಇನ್ನಷ್ಟು ವ್ಯಾಪಕವಾಗಿ ಹಬ್ಬಿದರೆ 4.9 ಕೋಟಿ ಸೋಂಕಿತರಾಗಿರಲಿದ್ದು 5.8 ಲಕ್ಷ ಜನ ಸಾವನ್ನಪ್ಪಲಿದ್ದಾರೆ. ಆದರೆ ಕೊರೋನಾದ ಹಬ್ಬುವಿಕೆಯನ್ನು ನಿಯಂತ್ರಿಸಲು ಸಾಧ್ಯವಾದರೆ 90.1 ಲಕ್ಷ ಪ್ರಕರಣಗಳು ಮತ್ತು 1.43 ಲಕ್ಷ ಸಾವು ಸಂಭವಿಸುವ ಅಂದಾಜನ್ನು ಈ ತಂಡ ಮಾಡಿದೆ.

**ಅಕ್ಟೋಬರ್‌ನಲ್ಲಿ 17.2 ಲಕ್ಷ ಸಕ್ರಿಯ ಪ್ರಕರಣ:** ಈಗ ಕೋವಿಡ್ ಹಬ್ಬುವಿಕೆ ಗಮನಿಸಿದರೆ ಅಕ್ಟೋಬರ್ ಮಧ್ಯದಲ್ಲಿ 17.2 ಲಕ್ಷ ಸಕ್ರಿಯ ಪ್ರಕರಣಗಳಿರುವ ಸಂಭವವಿದೆ. ಇದು ಗರಿಷ್ಠ ಪ್ರಮಾಣದ ಸಕ್ರಿಯ ಪ್ರಕರಣವಾಗಿರಲಿದೆ. ಆದರೆ ಮಾರ್ಚ್ ಅಂತ್ಯಕ್ಕೆ ಇದು 46,000 ಸಕ್ರಿಯ ಪ್ರಕರಣಕ್ಕೆ ಇಳಿಯಲಿದೆ. ಒಂದು ವೇಳೆ ಪರಿಸ್ಥಿತಿ ಬಿಗಡಾಯಿಸಿದರೆ ಡಿಸೆಂಬರ್ ಕೊನೆಯ ವಾರದಲ್ಲಿ 46.5 ಲಕ್ಷಗಳಷ್ಟು ಸಕ್ರಿಯ ಪ್ರಕರಣ ಗಳಿರಲಿದ್ದು, ಮಾರ್ಚ್ ಕೊನೆಯ ಹೊತ್ತಿಗೆ 20.4 ಲಕ್ಷ ಪ್ರಕರಣಗಳಿರಲಿವೆ. ಒಂದು ವೇಳೆ ಕೊರೋನಾ ಹಬ್ಬುವಿಕೆಯನ್ನು ನಿಯಂತ್ರಿಸು ವಲ್ಲಿ ದೇಶ ಸಫಲವಾದರೆ ಸೆಪ್ಟೆಂಬರ್ ಕೊನೆಯ ವಾರ ದೇಶದಲ್ಲಿ 13.1 ಲಕ್ಷ ಸಕ್ರಿಯ ಪ್ರಕರಣಗಳಿರಲಿದ್ದು ಮಾರ್ಚ್ ಕೊನೆಯ ವಾರದ ಹೊತ್ತಿಗೆ 5 ಸಾವಿರ ಸಕ್ರಿಯ ಪ್ರಕರಣಗಳಿರಲಿವೆ.

'ರಾಷ್ಟ್ರೀಯ ದತ್ತಾಂಶವನ್ನು ಪಡೆದು ಕೊಂಡು ಈ ಲೆಕ್ಕಾಚಾರವನ್ನು ಹಾಕಿದ್ದೇವೆ. ನಾವು ಈ ಲೆಕ್ಕಾಚಾರವನ್ನು ಹಾಕುವಾಗ ಜನರ ವರ್ತನೆ, ಸಾಮಾಜಿಕ ಅಂತರ, ಸ್ವಚ್ಛತಾ ಅಭ್ಯಾಸ, ಸರ್ಕಾರದ ಆದೇಶಗಳ ಪಾಲನೆ, ಸರ್ಕಾರದ ನೀತಿ ನಿಯಮಗಳನ್ನು ಗಮನದಲ್ಲಿರಿಸಿಕೊಂಡಿ ದ್ದೇವೆ. ಹಾಗೆಯೇ ಎಂದಿನಂತಿ ರುವ ದೈನಂದಿನ ಚಟುವಟಿಕೆ ಮತ್ತು ಲಾಕ್ ಡೌನ್ ನಲ್ಲಿನ ಮತ್ತಷ್ಟು ವಿನಾಯಿತಿಯನ್ನು ದೃಷ್ಟಿಯಲ್ಲಿಟ್ಟು ಕೊಂಡಿದ್ದೇವೆ' ಎಂದು ವಿಜ್ಞಾನಿಗಳ ತಂಡದ ಸದಸ್ಯರು ಹೇಳಿದ್ದಾರೆ.

## ರಾಜ್ಯದಲ್ಲಿ 2ನೇ ಬಾರಿ 9000+ ಕೇಸು

◄ ಮೊದಲ ಪುಟದಿಂದ

ಇದು ಈವರೆಗಿನ ದಾಖಲೆಯಾಗಿದೆ.

**ಬೆಂಗಳೂರಲ್ಲೇ ಅಧಿಕ:** ಬೆಂಗಳೂರಿನಲ್ಲಿ ಮಂಗಳವಾರ 40 ಜನ ಕೊರೋನಾದಿಂದ ಸಾವನ್ನಪ್ಪಿದ್ದು, ಒಟ್ಟು ಸಾವಿನ ಸಂಖ್ಯೆ 2005ಕ್ಕೆ ಮುಟ್ಟಿದೆ. ಉಳಿದಂತೆ ಮೈಸೂರು 12, ವಿಜಯಪುರ, ಕೊಪ್ಪಳ, ಕಲಬುರಗಿ, ದಾವಣಗೆರೆ, ಬಳ್ಳಾರಿ ತಲಾ 4, ತುಮ ಕೂರು, ರಾಯಚೂರು ತಲಾ 3, ಬಾಗಲಕೋಟೆ, ಬೆಂ.ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಧಾರವಾಡ, ಗದಗ, ಹಾವೇರಿ, ಉಡುಪಿ ತಲಾ 2 ಸಾವು. ಬೆಂಗಳೂರು ನಗರದಲ್ಲಿ 2967 ಮಂದಿಯಲ್ಲಿ ಹೊಸದಾಗಿ ಸೋಂಕು ಪತ್ತೆಯಾಗಿದೆ. ಮೈಸೂರು 737, ಹಾಸನ 461, ಬಳ್ಳಾರಿ 393, ದ.ಕನ್ನಡ 352, ತುಮಕೂರು 327, ಬೆಳಗಾವಿ 316, ದಾವಣಗೆರೆ 289, ರಾಯಚೂರು 245, ಶಿವಮೊಗ್ಗ 233, ಕಲಬು ರಗಿ 220, ಚಿಕ್ಕಮಗಳೂರು 210, ಧಾರವಾಡ 199, ಮಂಡ್ಯ 197, ಕೊಪ್ಪಳ 195, ಗದಗ 194, ಚಿತ್ರದುರ್ಗ 164, ಉಡುಪಿ 161, ಹಾವೇರಿ 153, ಬೆಂ.ಗ್ರಾಮಾಂತರ 145, ಯಾದಗಿರಿ 142, ಬಾಗಲಕೋಟೆ 136, ಉ.ಕನ್ನಡ 114, ಚಿಕ್ಕ ಬಳ್ಳಾಪುರ 106, ರಾಮನಗರ 105, ಕೋಲಾರ 64, ಬೀದರ್ 63, ಕೊಡಗು 54, ಚಾ.ನಗರ 49 ಮಂದಿಗೆ ಮಂಗಳವಾರ ಸೋಂಕು ತಗುಲಿದೆ.

**ದಾಖಲೆ 83 ಸಾವಿರ ಪರೀಕ್ಷೆ:** ಮಂಗಳವಾರ ರಾಜ್ಯದಲ್ಲಿ 83,670 ಕೊರೋನಾ ಪರೀಕ್ಷೆಗಳು ನಡೆದಿರು ವುದು ದಾಖಲೆಯಾಗಿದೆ. ಆಗಸ್ಟ್ 29 ರಂದು 72,684 ಜನರಿಗೆ ಪರೀಕ್ಷೆ ನಡೆಸಿದ್ದು ಅತಿ ಹೆಚ್ಚಿನದಾಗಿತ್ತು. ಒಟ್ಟಾರೆ ರಾಜ್ಯದಲ್ಲಿ ಈವರೆಗೆ ಕೊರೋನಾ ಪರೀಕ್ಷೆ ನಡೆಸಿದ ಸಂಖ್ಯೆ 29.79 ಲಕ್ಷ ತಲುಪಿದೆ.